## ವಾರ್ಷಿಕ ಶೈಕ್ಷಣಿಕ ಕಾರ್ಯಸೂಚಿ – 2008-09

**ಮೇ 08**

1) 30ನೇ ಮೇ - ಶಾಲಾ ಪ್ರಾರಂಭ
2) 31-05-2008 - ಶಾಲಾ ಪ್ರಾರಂಭೋತ್ಸವ
3) ಶಾಲಾ ಶೈಕ್ಷಣಿಕ ವೇಳಾ ಪಟ್ಟಿ ತಯಾರಿಕೆ

**ಜೂನ್**

1) ದಾಖಲಾತಿ ಪ್ರಕ್ರಿಯೆಯೊಂದಿಗೆ ಬೋಧನೆ ಪ್ರಾರಂಭ
2) ಸೇತುಬಂಧ ಎರಡನೇ ವಾರದಲ್ಲಿ ನಡೆಸುವುದು
3) ಪರಿಹಾರ ಬೋಧನೆ ಕಾರ್ಯ ಪ್ರಾರಂಭ

**ಜುಲೈ**

1) ಶಾಲಾ ಮಟ್ಟದಲ್ಲಿ ಕ್ರೀಡಾ ತರಬೇತಿಗಾಗಿ ಆಯ್ಕೆ
2) ಕ್ಲಸ್ಟರ್ ಮತ್ತು ತಾಲ್ಲೂಕು ಮಟ್ಟದ ಕ್ರೀಡಾ ಸಂಘಟನೆ

**ಆಗಸ್ಟ್**

1) ಸ್ವಾತಂತ್ರೋತ್ಸವ ದಿನಾಚರಣೆ ಪೂರ್ವ ಸಿದ್ಧತೆ/ಆಚರಣೆ
2) ಜಿಲ್ಲಾ ಮಟ್ಟದ ಕ್ರೀಡಾ ಕೂಟಗಳ ಸಂಘಟನೆ

**ಸೆಪ್ಟಂಬರ್**

1) ಜಿಲ್ಲಾ ಮಟ್ಟದ ಕ್ರೀಡಾ ಕೂಟಗಳ ಸಂಘಟನೆ
2) ಆಯ್ಕೆಯಾದ ಕ್ರೀಡಾ ಪಟುಗಳಿಗೆ ತರಬೇತಿ
3) ಮೊದಲನೆ ಸೆಮಿಸ್ಟರ್ ಪರೀಕ್ಷೆಗಳು
4) ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ

**ಅಕ್ಟೋಬರ್**

1) ಗಾಂಧಿ ಜಯಂತಿ ಆಚರಣೆ
2) ವಿಭಾಗೀಯ ಮತ್ತು ರಾಜ್ಯಮಟ್ಟದ ಕ್ರೀಡಾ ಕೂಟ ಸಂಘಟನೆ
3) ಮೊದಲನೆಯ ಸಮುದಾಯದತ್ತ ಶಾಲೆ ಕಾರ್ಯಕ್ರಮ
4) ಶೈಕ್ಷಣಿಕ ಪ್ರವಾಸ

**ನವೆಂಬರ್**

1) ರಾಜ್ಯೋತ್ಸವ ಆಚರಣೆ
2) ರಾಜ್ಯಮಟ್ಟದ ಕ್ರೀಡಾಕೂಟಗಳ ಸಂಘಟನೆ
3) ಪ್ರತಿಭಾ ಕಾರಂಜಿ

**ಡಿಸೆಂಬರ್**

1) ರಾಷ್ಟ್ರಮಟ್ಟದ ಕ್ರೀಡಾ ಕೂಟಗಳು
2) ಏಡ್ಸ್ ದಿನಾಚರಣೆ
3) ಶಾಲಾ ವಾರ್ಷಿಕೋತ್ಸವ ಆಚರಣೆ
4) ಶೈಕ್ಷಣಿಕ ಪ್ರವಾಸ
5) ಮಕ್ಕಳ ವೈದ್ಯಕೀಯ ತಪಾಸಣೆ
6) ರಾಷ್ಟ್ರೀಯ ಮಾಲಿನ್ಯ ನಿಯಂತ್ರಣಾ ದಿನಾಚರಣೆ
7) ಮಾನವ ಹಕ್ಕುಗಳ ದಿನಾಚರಣೆ

**ಜನವರಿ ೦೯** 1) ಗಣರಾಜ್ಯೋತ್ಸವ ಆಚರಣಾ ಪೂರ್ವ ಸಿದ್ಧತೆ/ಆಚರಣೆ
2) ಕಲಿತ ಪಾಠಗಳ ಪುನರಾವರ್ತನೆ
3) ಎರಡನೇ ಸಮುದಾಯದತ್ತ ಶಾಲೆ ಕಾರ್ಯಕ್ರಮ

**ಫೆಬ್ರವರಿ** 1) ಕಲಿಕೆಯ ದೃಢೀಕರಣ

**ಮಾರ್ಚಿ** 1) ವಾರ್ಷಿಕ ಪರೀಕ್ಷೆಗಳು (ಎರಡನೇ ಸೆಮಿಸ್ಟರ್ ಪರೀಕ್ಷೆ)

**ಏಪ್ರಿಲ್ 2009** - ಮೂರನೇ ಸಮುದಾಯದತ್ತ ಶಾಲೆ ಕಾರ್ಯಕ್ರಮ

## ಸಮುದಾಯದತ್ತ ಶಾಲೆ ಕಾರ್ಯಕ್ರಮ

| | ಪ್ರಾಥಮಿಕ ಶಾಲೆ | | ಪ್ರೌಢ ಶಾಲೆ | |
|---|---|---|---|---|
| ಆಕ್ಟೋಬರ್ 2008 | ಸೋಮವಾರ | 06-10-2008 | ಶುಕ್ರವಾರ | 03-10-2008 |
| ಜನವರಿ 2009 | ಸೋಮವಾರ | 05-01-2009 | ಸೋಮವಾರ | 12-01-2009 |
| ಏಪ್ರಿಲ್ 2009 | ಗುರುವಾರ | 09-04-2009 | ಶುಕ್ರವಾರ | 10-04-2009 |

| ಸೆಮಿಸ್ಟರ್ ಹಾಗೂ ರಜೆ ಅವಧಿ | |
|---|---|
| ದಿ: 30-05-2008 ರಿಂದ ದಿ: 07-10-2008 | **ಮೊದಲನೇ ಸೆಮಿಸ್ಟರ್** |
| ದಿ: 30-10-2008 ರಿಂದ 10-04-2009 | **ಎರಡನೇ ಸೆಮಿಸ್ಟರ್** |
| **ರಜಾ ಅವಧಿಗಳು** | |
| ದಿ: 08-10-2008 ರಿಂದ 29-10-2008 | **ಮಧ್ಯಂತರ ರಜೆ** |
| ದಿ: 11-04-2009 ರಿಂದ29-05-2009 | **ಬೇಸಿಗೆ ರಜೆ** |

## 2008-09 ಸಾಲಿನ ಮಾಹೆವಾರಿ ಕಾರ್ಯಸೂಚಿ

| ತಿಂಗಳು | ದಿನಾಂಕ | ಶಾಲೆಯಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ | ಪೂರಕ ಚಟುವಟಿಕೆಗಳು |
|---|---|---|---|
| ಏಪ್ರಿಲ್ & ಮೇ | 15.4.2008 ರಿಂದ 20.5.2008 | • ಜಿಲ್ಲಾ ಮಟ್ಟದ ಚೈತ್ರದ ಚಿಗುರು ಬೇಸಿಗೆ ಶಿಬಿರ (ವ್ಯಕ್ತಿತ್ವ ವಿಕಾಸ ಕಾರ್ಯಕ್ರಮ) | ಮಕ್ಕಳಿಗೆ ಶುಚಿತ್ವ, ಶಾಲಾ ಸ್ವಚ್ಛತೆ, ಸಮಯ ಪಾಲನೆ ಶಿಸ್ತು ಇತ್ಯಾದಿಗಳ ಕುರಿತು ಮಾರ್ಗದರ್ಶನ ನೀಡುವುದು. |
| | 24.5.2008 ರಿಂದ 29.5.2008 | • ದಾಖಲಾತಿಯ ಪೂರ್ವ ಸಿದ್ಧತೆ | ಪ್ರತಿ ಪಾಠಕ್ಕೂ ಬೋಧನಾ ಸಲಕರಣೆಗಳನ್ನು ಹೊಂದಿಸಿಕೊಂಡು ಶಾಲೆಯಲ್ಲಿ ತರಗತಿ ಬೋಧನೆ ಸಮಯದಲ್ಲಿ ಸಮರ್ಪಕವಾಗಿ ಉಪಯೋಗಿಸಿ ಪರಿಣಾಮಕಾರಿ ಭೊದನೆ ಮಾಡಲು ಮಾಡಲು ಸಿದ್ಧತೆ |

| | | | |
|---|---|---|---|
| | | ● ಶಾಲಾ ಸಂಸ್ಥಾಯೋಜನೆ ತಯಾರಿಕೆ<br>1. ಶೈಕ್ಷಣಿಕ<br>2. ಆಡಳಿತ<br>● ಶಾಲಾ ವೇಳಾಪಟ್ಟಿ ತಯಾರಿಕೆ/ಶಿಕ್ಷಕರ ಕಾರ್ಯವಿತರಣೆ<br>1. ಸಾಮಾನ್ಯ ವೇಳಾಪಟ್ಟಿ<br>2. ಶಿಕ್ಷಕರ ವೇಳಾಪಟ್ಟಿ<br>3. ತರಗತಿ ವೇಳಾಪಟ್ಟಿ<br>● ವಿವಿಧ ಸಂಘಗಳಿಗೆ ಶಿಕ್ಷಕ ಕಾರ್ಯದರ್ಶಿಗಳ ಆಯ್ಕೆ<br>● ವಾರ್ಷಿಕ ಪರೀಕ್ಷೆಗಳ ಫಲಿತಾಂಶ ಉತ್ತಮಪಡಿಸಲು ಕ್ರಿಯಾ ಯೋಜನೆ ತಯಾರಿ<br>● ಶೈಕ್ಷಣಿಕ ಕ್ರಿಯಾ ಯೋಜನೆ ತಯಾರಿ<br>● ಶಾಲಾ ಪುನರಾರಂಭದ ಪೂರ್ವ ಸಿದ್ಧತೆಗಳು<br>● ಶಿಕ್ಷಕರ ಸಭೆ ಶಾಲಾ ಅಭಿವೃದ್ಧಿ ಯೋಜನೆ ತಯಾರಿಕೆ .<br>● ಶಾಲಾ ಸ್ವಚ್ಛತಾ ಕಾರ್ಯಗಳು/ಪೂರ್ವಸಿದ್ಧತೆಗಳು<br>● ಶಿಕ್ಷಕರ ವಾರ್ಷಿಕ ಪಾಠ ಯೋಜನೆ ತಯಾರಿಕೆ (ನಿಗದಿತ ನಮೂನೆಯನ್ವಯ)<br>● ಪಾಠ ಟಿಪ್ಪಣಿ ತಯಾರಿಕೆ (ನಿಗದಿತ ನಮೂನೆಯನ್ವಯ)<br>● ಬೋಧನಾ ಸಲಕರಣೆಗಳ ತಯಾರಿಕೆ ಆರಂಭ<br>● ಆಕರ ಗ್ರಂಥಗಳ ಸಂಗ್ರಹಣೆ (ಆಧಾರ ಗ್ರಂಥಗಳು) | ಮಾಡಿಕೊಳ್ಳುವುದು. |
| | 31.5.2008 | ● ಶಾಲಾ ಪ್ರಾರಂಭೋತ್ಸವ<br>● ಸ್ವಾಗತ ಸಮಾರಂಭ (ಮಕ್ಕಳಿಗೆ)<br>● ಪಠ್ಯಪುಸ್ತಕ / ಸಮವಸ್ತ್ರ ವಿತರಣೆ<br>● 2 ರಿಂದ 7ನೇ ತರಗತಿಗಳ ಸೇತುಬಂಧ ಕಾರ್ಯಕ್ರಮಗಳ ಯೋಜನೆಯ ಸಿದ್ಧತೆ | |
| **ಜೂನ್** | 02.6.2008 | ● ದಾಖಲೆಯೊಂದಿಗೆ ನಿರಂತರ ಬೋಧನೆ ಹಾಗೂ ವಿಷಯಗಳ ಪುನರಾವರ್ತನೆ | ಬಳಸಿದ ಕಲಿಕೋಪಕರಣಗಳ ವಹಿಯನ್ನು ಶಿಕ್ಷಕರು ದಿನಾಂಕವಾರು ನಿರ್ವಹಿಸುವುದು ಗಣತಿಯಾದ ಎಲ್ಲಾ ಮಕ್ಕಳನ್ನು ದಾಖಲು ಮಾಡಿ ಕೊಳ್ಳುವುದು. ಗಣತಿಯಾಗಿ ದಾಖಲಾಗದಿರುವ/ ದಾಖಲಾಗಿ ದೀರ್ಘ ಗೈರುಹಾಜರಾಗುತ್ತಿರುವ ಮಕ್ಕಳ ಯಾದಿಯನ್ನು ತಯಾರಿಸಿಕೊಂಡು ದಾಖಲಾಗುವವರೆಗೆ ಅನುಪಾಲನೆ ಅಂತಹ ಮಕ್ಕಳ ಕೌಟುಂಬಿಕ ಗೈರು ಹಾಜರಿಗೆ ಕಾರಣ, ಹಿನ್ನೆಲೆ, ಕಲಿಕಾ ಪ್ರಗತಿ ಇತ್ಯಾದಿ ಅಂಶಗಳ ದಿನಚರಿಯನ್ನು ನಿರ್ವಹಿಸುವುದು, ಪೋಷಕರ ಕೌನ್ಸಿಲಿಂಗ್‌ಮತ್ತು ಸಮುದಾಯದತ್ತ ಶಾಲಾ ಕಾರ್ಯಕ್ರಮದ ಸಮಯದಲ್ಲಿ ದಿನಚರಿಯ ಈ ಮಾಹಿತಿಯನ್ನು ಬಳಸುವುದು. |
| – | 09.6.2008 ರಿಂದ<br>11.6.2008 ರೊಳಗೆ | ● ನೈದಾನಿಕ ಪರೀಕ್ಷೆಗಳು ಹಾಗೂ ಮೌಲ್ಯಮಾಪನ ಹಾಗೂ ಮಕ್ಕಳ ಕಲಿಕಾ ಕೊರತೆಗಳನ್ನು ಗುರುತಿಸುವುದು | |

| | | | |
|---|---|---|---|
| | 06.6.2008 | ● ಎಸ್.ಡಿ.ಎಂ.ಸಿ. ಸಭೆ | 5 & 6ನೇ ತರಗತಿ ಮಕ್ಕಳಿಗೆ ಶುದ್ಧ ಹಾಗೂ ಅಂದವಾದ ಬರಹ ಉಕ್ತಲೇಖನ |
| | 09.6.2008 | ● ವಿಶ್ವ ಪರಿಸರ ದಿನಾಚರಣೆ | ಅರಣ್ಯ ಹಾಗೂ ಕೃಷಿ ಇಲಾಖೆಯ ಸಹಯೋಗದೊಂದಿಗೆ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಹಾಗೂ ಶಾಲಾವರಣದಲ್ಲಿ ಗಿಡ ನೆಡೆಸಿ ಶಾಲಾ ವನ ಮಹೋತ್ಸವ ಆಚರಿಸುವುದು |
| | 16.6.2008 | ● ಪರಿಹಾರ ಬೋಧನೆ ಪ್ರಾರಂಭ | ವಿವಿಧ ಸಂಘಗಳ ವಿವಿಧ ಚಟುವಟಿಕೆಗಳ ವಾರ್ಷಿಕ ವೇಳಾಪಟ್ಟಿ ಸಿದ್ಧಪಡಿಸಿಕೊಂಡು ಕಲಿಕೆಗೆ ಪೂರಕವಾಗುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.ಎಲ್ಲಾ ಮಕ್ಕಳಿಗೂ ಒಂದಲ್ಲಾ ಒಂದು ಚಟುವಟಿಕೆಗಳಲ್ಲಿ ಪಾಲ್ಗೋಳ್ಳಲು ಅವಕಾಶ ನೀಡುವುದು. |
| | 17.6.2008 | ● ಶಾಲೆಯ ವಿವಿಧ ಸಂಘಗಳಿಗೆಸದಸ್ಯರ ಆಯ್ಕೆ ಮತ್ತು ವಾರ್ಷಿಕ ಯೋಜನೆಗೆ ಸಿದ್ಧತೆ. | |
| | 19.6.2008 | ● ವಿವಿಧ ಶಾಲಾ ಸಂಘಗಳಿಗೆ ಕಾರ್ಯಕ್ರಮಗಳ ಪರಿಚಯ ಮತ್ತು ಮೇಲ್ಕಂಡ ವಿವಿಧ ಸಂಘಗಳ ಉದ್ಘಾಟನೆ | |
| | 22.6.2008 ರಿಂದ | ● ವಿಶ್ವ ಬಾಲಕ ದೌರ್ಜನ್ಯ ವಿರೋಧಿ ದಿನಾಚರಣೆ | ಮಕ್ಕಳ ಹಕ್ಕುಗಳ ಕ್ಲಬ್/ಶಾಲಾ ಗ್ರಾಹಕರ ಸಂಘ ರಚನೆ, ಮಕ್ಕಳ ಹಕ್ಕುಗಳ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳುವುದು. |
| | 30.06.2008 ರಿಂದ | ● ಪರಿಹಾರ ಬೋಧನೆ ಆಧಾರಿತ ಸೇತುಬಂಧ ಕಾರ್ಯಕ್ರಮ ಸಾಫಲ್ಯ ಪರೀಕ್ಷೆ | |
| **ಜುಲೈ** | 1.7.2008 ರಿಂದ | ● ಸೇತುಬಂಧ ಬೋಧನೆಯ ನಂತರದ ಶೈಕ್ಷಣಿಕ ಪ್ರಗತಿಯ ವಿಶ್ಲೇಷಣೆ ಕುರಿತು ಸಮಾಲೋಚನೆ ಹಾಗೂ ಅಂತರಾವಲೋಕನ | ವಿಶೇಷ ತರಗತಿ ರಸಪ್ರಶ್ನೆ ಗುಂಪು ಅಧ್ಯಯನ ದತ್ತಕ ಯೋಜನೆ ಕಾರ್ಯಕ್ರಮಗಳ ಅನುಷ್ಠಾನ |
| | 2.7.2008 ರಿಂದ | ● ಸಿ+ ಹಾಗೂ ಸಿ ಗ್ರೇಡ್ ಪಡೆದ ವಿದ್ಯಾರ್ಥಿಗಳಿಗೆ ನಿರಂತರ ಪರಿಹಾರ ಬೋಧನೆ ಪ್ರಾರಂಭ | |
| ಜುಲೈ | 11.7.2008 | ● ವಿಶ್ವ ಜನಸಂಖ್ಯಾ ದಿನಾಚರಣೆ | ಜನಸಂಖ್ಯಾ ಶಿಕ್ಷಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. |
| | | ● ಜನಸಂಖ್ಯಾ ಸ್ಫೋಟ–ಪರಿಣಾಮ<br>● ಪರಿಹಾರಗಳ ಬಗ್ಗೆ ಕಾರ್ಯಕ್ರಮ<br>● ಏಡ್ಸ್ ಶಾಲಾ ಶಿಕ್ಷಣ, ಹದಿಹರೆಯ ಶಿಕ್ಷಣ / ಜೀವನ ಕೌಶಲಗಳನ್ನು ತರಗತಿಗಳಲ್ಲಿ ಬೋಧನೆ ಮಾಡುವುದು. | |
| | 21.7.2008 | ● ಶಾಲಾಮಟ್ಟದ ಅಥ್ಲೇಟಿಕ್ಸ್ ಮತ್ತು ಕ್ರೀಡಾ ಸ್ಪರ್ಧೆಗಳು | ಕ್ರೀಡಾಪಟುಗಳ ಆಯ್ಕೆ |
| | 30.7.2008 | ● ಜುಲೈ ಮಾಹೆಯ ಶಾಲಾ ಕಾರ್ಯಗಳ ಪುನರಾವಲೋಕನ | |

**ಆಗಸ್ಟ್**

| | | | |
|---|---|---|---|
| | 15.8.2008 | ● ಸ್ವಾತಂತ್ರ್ಯ ದಿನಾಚರಣೆ | |
| | 16.8.2008 ರಿಂದ 18.8.2008 ರವರೆಗೆ | ● ಶಾಲಾ ಮಟ್ಟದ ಸಾಹಿತ್ಯ ಮತ್ತು ಲಲಿತ ಕಲೆಗಳ ಸ್ಪರ್ಧೆಗಳು (ಜಿಲ್ಲಾ ಮಟ್ಟದ) ಸ್ಪರ್ಧೆಗಳಲ್ಲಿ ಭಾಗವಹಿಸುವ ಮಕ್ಕಳಿಗೆ ಸೂಕ್ತ ತರಬೇತಿ/ಮಾರ್ಗದರ್ಶನ | |
| | 20.8.2008 | ● ರಾಷ್ಟ್ರೀಯ ಕ್ರೀಡಾ ದಿನ | |
| ಸೆಪ್ಟೆಂಬರ್ | 04.9.2008 | ● ಶಾಲಾ ಮಟ್ಟದ ಕಲಾ ಪ್ರದರ್ಶನ | 2ನೇ ವಾರ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ |
| | 05.9.2008 | ● ಶಿಕ್ಷಕರ ದಿನಾಚರಣೆ | |
| | 08.9.2008 | ● ಅಂತರಾಷ್ಟ್ರೀಯ ಸಾಕ್ಷರತಾ ದಿನಾಚರಣೆ | ಚರ್ಚಾ ಸ್ಪರ್ದೆ, ಪ್ರಬಂಧ ಸ್ಪರ್ದೆಗಳು |
| | 15.9.2008 | ● ಸಂಚಯಿಕ ದಿನಾಚರಣೆ ಸರ್ ಎಂ. ವಿಶ್ವೇಶ್ವರಯ್ಯನವರ ಜಯಂತಿ | ಜಿಲ್ಲಾ ಮಟ್ಟದ ಕ್ರೀಡಾ ಸ್ಪರ್ಧೆಗಳು |
| | 18.9.2008 | ● ಓಜೋನ್ ದಿನಾಚರಣೆ | ಓಜೋನ್ ಹಾಗೂ ಇನ್ನಿತರ ವೈಜ್ಞಾನಿಕ ವಿಷಯಗಳ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡುವುದು. |
| | 21.9.2008 | ● ಅಂತರಾಷ್ಟ್ರೀಯ ಶಾಂತಿ ಮತ್ತು ಅಹಿಂಸಾ ದಿನಾಚರಣೆ ಶಾಂತಿ ಅಹಿಂಸಾ ವಿಷಯಗಳ ಕುರಿತು ಮಕ್ಕಳಿಗೆ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. | ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ರಜೆಯಲ್ಲಿ ನಿರ್ವಹಿಸಲು ವಿದ್ಯಾರ್ಥಿವಾರು, ವಿಷಯವಾರು ಮನೆ ಕೆಲಸಗಳನ್ನು ನೀಡುವುದು ಹಾಗೂ ಪೋಷಕರಿಗೆ ಮಾರ್ಗದರ್ಶನ ನೀಡುವುದು |
| ಅಕ್ಟೋಬರ್ | 02.10.2008 | ● ಗಾಂಧಿ ಜಯಂತಿ | |
| | 03.10.2008 | ● **ಸಮುದಾಯದತ್ತ ಶಾಲೆ (ಪ್ರೌಢ ಶಾಲೆಗಳಲ್ಲಿ)** | |
| | 04.10.2008 | ● ಅಂತರಾಷ್ಟ್ರೀಯ ಪ್ರಾಣಿಗಳ ದಿನ | ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ |
| | 06.102008 | ● **ಸಮುದಾಯದತ್ತ ಶಾಲೆ (ಪ್ರಾಥಮಿಕ ಶಾಲೆಗಳಲ್ಲಿ )** | |
| | 15.10.2008 | ● ವಿಭಾಗ ಮಟ್ಟದ ಸ್ಪರ್ಧೆಗಳು | |
| | 16.10.2008 ರಿಂದ 30.10.2008 ರವರೆಗೆ | ● ರಾಜ್ಯಮಟ್ಟದ ಕ್ರೀಡಾಕೂಟಗಳು | |

## 08.10.2008 ರಿಂದ 29.10.2008 ರವರೆಗೆ ಮಧ್ಯಂತರ ರಜೆ

| | | | |
|---|---|---|---|
| ನವೆಂಬರ್ | 01.11.2008 ರಿಂದ 07.11.2008 | ● ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ವಿಶ್ವ ವನ್ಯಮೃಗಗಳ ಸಪ್ತಾಹ | ನವೆಂಬರ್ 1 ರಿಂದ ಓದು ಕನ್ನಡ ಅಭಿಯಾನ ಪ್ರಾರಂಭ ಮೊದಲ ವಾರದಲ್ಲಿ ಸ್ಕೌಟ್ಸ್/ಗೈಡ್ಸ್ ಕಾರ್ಯಕ್ರಮ |
| | 14.11.2008 | ● ಮಕ್ಕಳ ದಿನಾಚರಣೆ | |

| | | | |
|---|---|---|---|
| | | • ವಿಶ್ವ ಮಧುಮೇಹ ದಿನಾಚರಣೆ | |
| | 19.11.2008 | • ರಾಷ್ಟ್ರೀಯ ಭಾವೈಕ್ಯತಾ ಸಪ್ತಾಹ | ರಾಷ್ಟ್ರೀಯ ಭಾವೈಕ್ಯಗೀತ ಗಾಯನ ಕಾರ್ಯಕ್ರಮ ಹಮ್ಮಿ ಕೊಳ್ಳುವುದು. |
| | 27.11.2008 | • ಮಹಿಳಾ ದಿನಾಚರಣೆ | ರಾಜ್ಯೋತ್ಸವ ಕ್ರೀಡಾ ಸ್ಪರ್ಧೆಗಳು |
| | 29.11.2008 | • ಶಿಕ್ಷಕರ ಮಾಸಿಕ ಸಭೆ ಶೈಕ್ಷಣಿಕ ಸಮಾಲೋಚನೆ | |
| ಡಿಸೆಂಬರ್ | 01.12.2008 | • ಏಡ್ಸ್ ದಿನಾಚರಣೆ | ಮೊದಲನೇ ವಾರದಲ್ಲಿ ಏಡ್ಸ್ ಶಾಲಾ ಶಿಕ್ಷಣ ಕುರಿತು ಚಟುವಟಿಕೆಗಳನ್ನು ನಡೆಸುವುದು |
| | 02.12.2008 | • ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನಾಚರಣೆ | ಶಾಲಾ ಪರಿಸರ ನಿರ್ವಹಣೆಗೆ ಸಂಬಂದಿಸಿದ ಚಟುವಟಿಕೆಗಳನ್ನು ನಡೆಸುವುದು |
| | 10.12.2008 | • ಮಾನವ ಹಕ್ಕುಗಳ ದಿನಾಚರಣೆ | ಮಾನವ ಹಕ್ಕುಗಳ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. |
| | 23.12.2008 | • ವಿಶ್ವ ರೈತರ ದಿನ | ಮೂರನೇ ವಾರದಲ್ಲಿ ಶಾಲಾ ಗ್ರಾಹಕರ ಸಂಘದ ಚಟುವಟಿಕೆಗಳನ್ನು ನಡೆಸಲು ಪೂರ್ವಸಿದ್ದತೆ |
| | 24.12.2008 ರಿಂದ | • ಗ್ರಾಹಕರ ದಿನಾಚರಣೆ | ಶಾಲಾ ಗ್ರಾಹಕರ ಸಂಘ (Consumer Club) ಗಳ ಚಟುವಟಿಕೆಗಳನ್ನು ನಡೆಸುವುದು |
| ಜನವರಿ | | | |
| | 05.01.2009 | • ಎಸ್.ಡಿ.ಎಂ.ಸಿ. ಸಭೆ ಶಾಲಾ ಪ್ರಗತಿ ಪರಿಶೀಲನೆ **ಸಮುದಾಯದತ್ತ ಶಾಲೆ (ಪ್ರಾಥಮಿಕ ಶಾಲೆಗಳಲ್ಲಿ)** | ಶಾಲೆಗೆ ಗೈರುಹಾಜರಾಗುತ್ತಿರುವ ಮತ್ತು ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗೆ ಹಾಗೂ ಪೋಷಕರಿಗೆ ಇವೆರಡರ ಸಂಬಂದದ ಬಗ್ಗೆ ಅರಿವು ಮೂಡಿಸುವುದು<br><br>ನಮ್ಮೂರು ನಮ್ಮ ನಾಡು ಪ್ರಬಂಧ ಸ್ಪರ್ಧೆ |
| | 10.01.2009 | • ವಿಶ್ವ ಹಾಸ್ಯ ದಿನ | ಹಾಸ್ಯ ನಾಟಕ ಪ್ರಹಸನ ಮಾಡಿಸುವುದು |
| | 12-01-2009 | • **ಸಮುದಾಯದತ್ತ ಶಾಲೆ [ಪ್ರೌಢಶಾಲೆಗಳಲ್ಲಿ)** | |
| | 12.01.2009 | • ಸ್ವಾಮಿ ವಿವೇಕಾನಂದರ ಜನ್ಮ ದಿನ | ಸ್ವಾಮಿ ವಿವೇಕಾನಂದರ ಜೀವನದ ಆದರ್ಶ ಕುರಿತು ಉಪನ್ಯಾಸ |

| | | | |
|---|---|---|---|
| | | ● ರಾಷ್ಟ್ರೀಯ ಯುವ ದಿನಾಚರಣೆ | ಮಕ್ಕಳಿಗೆ ಚರ್ಚೆ ಪ್ರಬಂಧ ರಚನೆ ಇತ್ಯಾದಿ ಕಾರ್ಯಕ್ರಮ ರೂಪಿಸುವುದು<br>ನಾನೇನು ಮಾಡಲಿ ಹೊಸ ವರ್ಷದಲ್ಲಿ |
| | 15.01.2009 | ● ಭೂ ಸೇನಾ ದಿನ | ಶಾಲಾ ಮಟ್ಟದಲ್ಲಿ ವಿಜ್ಞಾನ ಮತ್ತು ಗಣಿತ ಮೇಳಗಳನ್ನು ಏರ್ಪಡಿಸುವುದು. |
| | 26.01.2009 | ● ಗಣರಾಜ್ಯೋತ್ಸವ ದಿನಾಚರಣೆ | |
| | 30.01.2009 | ● ಹುತ್ಮಾತರ ದಿನ | |
| | 31.01.2009 | ● ಶಿಕ್ಷಕರ ಮಾಸಿಕ ಸಭೆ ವಿಶ್ಲೇಷಣೆ ಶೈಕ್ಷಣಿಕ ಸಮಾಲೋಚನಾ ಸಭೆ | |
| ಫೆಬ್ರವರಿ | 06.02.2009 | ● 2ನೇ ಸೆಮಿಸ್ಟರ್ ಗೆ ಪೂರ್ವ ಸಿದ್ಧತಾ ಪರೀಕ್ಷೆಗಳು | |
| | 07.02.2009 | ● ವಿಶ್ವ ಆರೋಗ್ಯ ದಿನಾಚರಣೆ | ಆರೋಗ್ಯ ಶಿಕ್ಷಣ ನೀಡುವುದು |
| | 09.02.2009 | ● ವಿಶ್ವ ಮಹಿಳಾ ದಿನಾಚರಣೆ | |
| | 10.02.2009 | ● ಸರ್.ಸಿ.ವಿ. ರಾಮನ್ ಜನ್ಮ ದಿನಾಚರಣೆ | ವಿಜ್ಞಾನ ಕಾರ್ಯಕ್ರಮ ಹಮ್ಮಿಕೊಳ್ಳುವುದು |
| | 15.02.2009 | ● ವಿಶ್ವ ಅಂಗವಿಕಲರ ದಿನಾಚರಣೆ | |
| | 28.02.2009 | ● ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಹಾಗೂ ಶಿಕ್ಷಕರ ಮಾಸಿಕ ಸಭೆ, ಶೈಕ್ಷಣಿಕ ಸಮಾಲೋಚನಾ ಸಭೆ ಪೂರ್ವ ಸಿದ್ಧತಾ ಪರೀಕ್ಷೆಯ ಫಲಿತಾಂಶ ವಿಶ್ಲೇಷಣೆ ಮಾರ್ಗದರ್ಶನ ಪುನರಾವರ್ತನೆ ತರಗತಿಗಳು | |
| ಮಾರ್ಚ್ | 20.03.2009 ರಿಂದ 27.03.2009 ರವರೆಗೆ | ● ಎರಡನೇ ಸೆಮಿಸ್ಟರ್ ಪರೀಕ್ಷೆಗಳು | |
| | 31.03.2009 | ● ಶಿಕ್ಷಕರ ಮಾಸಿಕ ಸಭೆ | |
| ಏಪ್ರಿಲ್ | 03.04.2009ರಿಂದ 07.04.2009ರವರೆಗೆ | ● ಎರಡನೇ ಸೆಮಿಸ್ಟರ್ ಪರೀಕ್ಷಾ ಉತ್ತರ ಪತ್ರಿಕೆಗಳ ಮೌಲ್ಯ ಮಾಪನ | |
| | 09.04.2009 | ● **ಸಮುದಾಯದತ್ತ ಶಾಲೆ (ಪ್ರಾಥಮಿಕ ಶಾಲೆಗಳಲ್ಲಿ)** | |
| | 10.04.2009 | ● ಎರಡನೇ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶ ಪ್ರಕಟಣೆ ಮತ್ತು ಪ್ರಗತಿ ಪತ್ರ ವಿತರಣೆ<br>● **ಸಮುದಾಯದತ್ತ ಶಾಲೆ (ಪ್ರೌಢ ಶಾಲೆಗಳಲ್ಲಿ)** | |

**ಬೇಸಿಗೆ ರಜೆ ಪ್ರಾರಂಭ ದಿ : 11–04–2009 ರಿಂದ**

**ಸೂಚನೆ:–ರಾಷ್ಟ್ರೀಯ ಅಥವಾ ಅಂತರ ರಾಷ್ಟ್ರೀಯ ಕಾರ್ಯಕ್ರಮಗಳು ರಜಾದಿನ ಆಗಿದ್ದಲ್ಲಿ ಅದೇ ದಿನ ನಡೆಸುವುದು ಅರ್ಥಪೂರ್ಣ ಹಾಗೂ ಸೂಕ್ತ.**

# ಮಾದರಿ ಶಾಲೆಯ ದೈನಂದಿನ ಕಾರ್ಯಸೂಚಿ

| ಕ್ರ.ಸಂ. | ಮುಖ್ಯ ಶಿಕ್ಷಕರು | ಸಹ ಶಿಕ್ಷಕರು | ಮಕ್ಕಳು |
|---|---|---|---|
| 1. | ಮುಖ್ಯ ಶಿಕ್ಷಕರು ಶಾಲೆ ಪ್ರಾರಂಭಕ್ಕೆ 1 ಘಂಟೆ ಮುಂಚೆ ಶಾಲೆಗೆ ಬರಬೇಕು. | ಸಹ ಶಿಕ್ಷಕರು ಕನಿಷ್ಠ 45 ನಿಮಿಷ ಮುಂಚೆ ಶಾಲೆಗೆ ಹಾಜರಾಗಬೇಕು. | ಮಕ್ಕಳು 30 ನಿಮಿಷ ಮುಂಚೆ ಶಾಲೆಗೆ ಬರಬೇಕು. |
| 2. | ಆ ದಿನದ ಶಾಲೆಯ ಕಾರ್ಯಕ್ರಮಗಳನ್ನು ಆಯೋಜಿಸುವುದು. | ದಿನದ ಕೆಲಸವನ್ನು ಹಂಚಿಕೊಳ್ಳುವುದು | ಗುಂಪುಗಳಲ್ಲಿ ಅಧ್ಯಯನ ಮಾಡುವುದು. |
| 3. | ಗೈರು ಹಾಜರಾದ ಶಿಕ್ಷಕರ ಬದಲಿ ಕಾರ್ಯ ವ್ಯವಸ್ಥೆ ಮಾಡುವುದು | ಪಾಠಗಳಿಗೆ ಸಂಬಂಧಿಸಿದ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳುವುದು | ತಂಡದ ನಾಯಕ ಇವರಿಗೆ ಮಾರ್ಗದರ್ಶನ ಮಾಡುವುದು. |
| 4. | ಶಿಕ್ಷಕರಿಂದ ದೈನಂದಿನ ಕೆಲಸಗಳನ್ನು ಕ್ರಮವರಿತು ಹಂಚುವುದು. ಅಕ್ಷರ ದಾಸೋಹದ ಬಿಸಿಯೂಟಕ್ಕೆ ಅಗತ್ಯವಾದ ಸ್ವಚ್ಛತಾ ಹಾಗೂ ಸಿದ್ಧತಾ ಕಾರ್ಯಕ್ರಮಗಳ ಪರಿಶೀಲನೆ ಮಾಡುವುದು. | ಅಗತ್ಯ ಪಾಠೋಪಕರಣ ಸಿದ್ಧಪಡಿಸಿಕೊಳ್ಳುವುದು | ಗೃಹ ಪಾಠಗಳನ್ನು ತಂಡದ ನಾಯಕ ನೋಡುವುದು. |
| 5. | ಶಿಕ್ಷಕರಿಂದ ಗೈರು ಹಾಜರಾಗುತ್ತಿರುವ ಮಕ್ಕಳ ಯಾದಿ ಪಡೆಯುವುದು | ನಿರಂತರ ದೀರ್ಘ ಗೈರುಹಾಜರು ಆಗುತ್ತಿರುವ ಮಕ್ಕಳನ್ನು ಶಾಲೆಗೆ ಕರೆತರುವ ಬಗ್ಗೆ ಕ್ರಮ | ಅವಶ್ಯವಿದ್ದಲ್ಲಿ ಮಾರ್ಗದರ್ಶಿ ಶಿಕ್ಷಕರ ಸಹಾಯ ಪಡೆಯುವುದು. |
| 6. | **ಪ್ರಾರ್ಥನೆ –** ನಾಡಗೀತೆಯ ನಂತರ ಪತ್ರಿಕಾ ವಾಚನ, ಚಿಂತನ ಕಾರ್ಯಕ್ರಮಗಳಿರಲಿ, ಪ್ರಾರ್ಥನೆಯ ಕೊನೆಯಲ್ಲಿ ರಾಷ್ಟ್ರಗೀತೆಯನ್ನು ಹಾಡಿಸಿ, ವೇಳಾಪಟ್ಟಿಯಂತೆ ಶಾಲೆಯಲ್ಲಿ ತರಗತಿಗಳನ್ನು ನಡೆಸುವುದು. ಶಿಕ್ಷಕರು ರಜೆಯ ಮೇಲಿದ್ದಲ್ಲಿ ಬದಲಿ ಕಾರ್ಯ ವ್ಯವಸ್ಥೆ ಮಾಡಿರುವ ಬಗ್ಗೆ ಮಕ್ಕಳಿಗೆ ತಿಳಿಸುವುದು. | ದೈಹಿಕ ಶಿಕ್ಷಣ ಶಿಕ್ಷಕರ ಸಹಯೋಗದೊಂದಿಗೆ ವ್ಯವಸ್ಥೆ ಮಾಡುವುದು ಹಾಗೂ ಎಲ್ಲಾ ಶಿಕ್ಷಕರು ಭಾಗವಹಿಸುವುದು. ದೈಹಿಕ ಶಿಕ್ಷಣ ಶಿಕ್ಷಕರಿಲ್ಲದಿದ್ದಲ್ಲಿ ಯಾರಾದರೂ ಒಬ್ಬ ಶಿಕ್ಷಕರಿಗೆ ಈ ಜವಾಬ್ದಾರಿಯನ್ನು ಮುಖ್ಯಶಿಕ್ಷಕರು ವಹಿಸುವುದು. | ಪ್ರಾರ್ಥನಾ ಸಮಯದಲ್ಲಿ ಶಾಲಾ ಆವರಣದಲ್ಲಿ ಹಾಜರಿರುವ ಎಲ್ಲರೂ (ಪೋಷಕರು ಸೇರಿದಂತೆ) ಭಾಗವಹಿಸುವುದು |
| 7. | ವಾರಕ್ಕೊಂದು ದಿನ ಸಾಮೂಹಿಕ ಕವಾಯತು. | ಕವಾಯತು ವೀಕ್ಷಣೆ ಹಾಗೂ ಮಾರ್ಗದರ್ಶನ | ಎಲ್ಲಾ ಮಕ್ಕಳು |
| 8. | ದಿನಂಪ್ರತಿ ಸಾಯಂಕಾಲ ಮಗ್ಗಿಗಳ ಸಾಮೂಹಿಕ ಪಠಣ. | ಪರಿವೀಕ್ಷಣೆ ಮತ್ತು ಮಾರ್ಗದರ್ಶನ | ಎಲ್ಲಾ ಮಕ್ಕಳು |
| 9. | ಮುಖ್ಯ ಗುರುಗಳಿಂದ ಮೇಲ್ವಿಚಾರಣೆ ಹಾಗೂ ಪ್ರಮುಖ ವಿಷಯಗಳ ಬೋಧನೆ. | ಮುಖ್ಯ ಗುರುಗಳು ಕೊಟ್ಟ ಸೂಚನೆಯ ಅನುಪಾಲನೆ | ಗೃಹಪಾಠ ಹಾಗೂ ಕಲಿಕೆಯಲ್ಲಿ ಅಭಿರುಚಿ ಹೊಂದುವುದು. |
| 10. | ಶಾಲೆ ಮುಗಿದ ನಂತರ ಶಾಲಾ ಸ್ವಚ್ಛತೆಗೆ ಸಹಕರಿಸಿ, ಕೈತೋಟವಿದ್ದಲ್ಲಿ ನೀರುಣಿಸುವುದು. ಗುಂಪುಗಳಲ್ಲಿ ಚಟುವಟಿಕೆಯನ್ನು | ದೈಹಿಕ/ಚಿತ್ರಕಲಾ ಶಿಕ್ಷಕರ ಸಹಯೋಗದೊಂದಿಗೆ ವ್ಯವಸ್ಥೆ ಮಾಡುವುದು | ಎಲ್ಲಾ ಮಕ್ಕಳು |

| | | |
|---|---|---|
| ಮಾಡಿಸುವುದು ಕ್ರೀಡೆಯಲ್ಲಿ ಆಸಕ್ತ ಮಕ್ಕಳು ಕ್ರೀಡೆಗಳನ್ನು ಅಭ್ಯಸಿಸುವಂತೆ ಪ್ರೇರೇಪಿಸುವುದು. (ಪರಿಹಾರ ಬೋಧನೆ, ಇತ್ಯಾದಿ) | ಸಂಬಂದಿಸಿದ ಶಿಕ್ಷಕರು | ಸಂಬಂದಿಸಿದ ಮಕ್ಕಳು |

## ಶಾಲಾ ಕರ್ತವ್ಯದ ಜೊತೆಯಲ್ಲಿ ಅಪೇಕ್ಷಿತ ಕಾರ್ಯಗಳ ಪಟ್ಟಿ

- ಮಕ್ಕಳ ಸ್ವಚ್ಛತೆ ಮತ್ತು ಆರೋಗ್ಯ ಪರಿಶೀಲನೆ
- ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಮಕ್ಕಳ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ/ಅಭ್ಯಾಸ /ಉತ್ತೇಜಿತ ಪುರಸ್ಕಾರ ಸಮಾರಂಭಗಳನ್ನು ಏರ್ಪಡಿಸುವುದು.
- ಶಾಲಾ ಕೈತೋಟ ನಿರ್ವಹಣೆ
- ಪರಿಸರ ಶುಚಿತ್ವ ಕಾರ್ಯಕ್ರಮಗಳನ್ನು ನಡೆಸುವುದು.
- ವಸ್ತು ಪ್ರದರ್ಶನಗಳನ್ನು ಏರ್ಪಡಿಸುವುದು.
- ಹೊರ ಸಂಚಾರ ಮತ್ತು ಪ್ರವಾಸಗಳನ್ನು ನಿರ್ವಹಿಸುವುದು.
- ಮೆಟ್ರಿಕ್ ಮೇಳ, ಚಿಣ್ಣರ ಮೇಳ, ನಾಟಕಗಳು ಮುಂತಾದವುಗಳನ್ನು ಏರ್ಪಡಿಸುವುದು.
- ಸೃಜನಾತ್ಮಕತೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಪರಿಸರ ಅಧ್ಯಯನ ಕಾರ್ಯಕ್ರಮಗಳನ್ನು ನಡೆಸುವುದು
- ಶಾಲಾ ಮೂಲಭೂತ ಸೌಲಭ್ಯಗಳಾದ ನೀರು, ಶೌಚಾಲಯ, ಆಟದ ಮೈದಾನ, ವಿದ್ಯುತ್ ಇವುಗಳ ನಿರ್ವಹಣೆ
- ಶಾಲಾಭಿವೃದ್ಧಿಗಾಗಿ ದೇಣಿಗೆ ಸಂಗ್ರಹಿಸುವುದು.
- ಮಕ್ಕಳ ವೈದ್ಯಕೀಯ ಪರೀಕ್ಷೆಗಳು
- ತಾಯಂದಿರ, ಪೋಷಕರ ಮಕ್ಕಳ ಸಭೆಗಳನ್ನು ಏರ್ಪಡಿಸುವುದು.
- ಮಕ್ಕಳ ಹಕ್ಕುಗಳ ಕ್ಲಬ್/ಶಾಲಾ ಗ್ರಾಹಕರ ಸಂಘಗಳನ್ನು ರಚಿಸಿ ನಿರ್ವಹಿಸುವುದು.
- ಶಾಲೆ ಬಿಟ್ಟ ಮಕ್ಕಳ ಮನೆಗೆ ಹೋಗಿ ಪೋಷಕರ ಮನವೊಲಿಸಿ ಶಾಲೆಗೆ ಕರೆತರುವುದು.
- ಹದಿಹರೆಯ ಶಿಕ್ಷಣ ಹಾಗೂ ಜೀವನ ಕೌಶಲಗಳನ್ನು ಶೈಕ್ಷಣಿಕ ಚಟುವಟಿಕೆಗಳಲ್ಲಿ ಅಳವಡಿಸಿ ಅನುಷ್ಠಾನಗೊಳಿಸುವುದು.
- ಸೇವಾ ನಿರತ ಶಿಕ್ಷಕರು ಕಡ್ಡಾಯವಾಗಿ ತರಬೇತಿಗಳಿಗೆ ಹಾಜರಾಗುವ ಮುನ್ನ ಪೂರ್ಣಪ್ರಮಾಣದ ಸಿದ್ದತೆ ಮಾಡಿಕೊಳ್ಳುವುದು ಮುಖ್ಯಶಿಕ್ಷಕರು ಈ ಅಂಶವನ್ನು ಖಚಿತಪಡಿಸಿಕೊಳ್ಳುವುದು.
- ಪ್ರತಿ ದಿನ ಮುಂಜಾನೆ ವಿಶೇಷ ತರಗತಿಯಲ್ಲಿ ಒಂದು ಗಂಟೆ ಮಕ್ಕಳಿಗೆ ದಿನಕ್ಕೊಂದು ವಿಷಯದಂತೆ ಬೋಧಿಸುವುದು.
- ಸಾಯಂಕಾಲ ಒಂದು ಗಂಟೆ ವಿಷಯವಾರು ಗುಂಪು ಅಧ್ಯಯನ ಏರ್ಪಡಿಸುವುದು.

**ಪ್ರತಿ ದಿನ ಶಾಲೆಯಲ್ಲಿ ಎಲ್ಲರ ಮೊಗದ ಮೇಲಿನ ಮುಗುಳು ನಗೆಯಿಂದ ಕಲಿಕೆಗೆ ಚಾಲನೆ ದೊರೆಯಲಿ.**

## ಶೈಕ್ಷಣಿಕ ನಿರೀಕ್ಷೆಗಳು

## ಮಕ್ಕಳ ನಿರೀಕ್ಷೆ : ಶಿಕ್ಷಕರಿಂದ ಹಾಗೂ ಪಾಲಕರಿಂದ

ಈ ಕೆಳಗಿನ ಅಂಶಗಳು, ಹಲವಾರು ಸಂದರ್ಭದಲ್ಲಿ ಮಕ್ಕಳ ತೊದಲು ನುಡಿಯಿಂದ ಮೂಡಿ ಬಂದ ಮುತ್ತಿನಂತಹ ಮಾತುಗಳು. ಇವು ಕೇವಲ ಶಬ್ದಗಳಲ್ಲ. ಇವುಗಳಲ್ಲಿಯ ಆಂತರ್ಯ ಹಾಗೂ ಅನುಭವದಿಂದ ತುಲನಾತ್ಮಕವಾಗಿ ತಂದೆ, ತಾಯಿ, ಪಾಲಕ ಪೋಷಕರೊಂದಿಗೆ ಚರ್ಚಿಸಿ ಅವರುಗಳ ಮೃದು ಮನಸ್ಸಿಗೆ ತಟ್ಟಬೇಕು. ಮುಟ್ಟಬೇಕು ಇಲ್ಲಿಯ ಅಂಶಗಳನ್ನು ಪಠ್ಯೇತರ ಚಟುವಟಿಕೆಗಳನ್ನಾಗಿಯೂ ಬಳಸಬಹುದು.

## ಮಕ್ಕಳು ಶಿಕ್ಷಕರಿಂದ ಮಾಡುವ ನಿರೀಕ್ಷೆಗಳು

1. ಶಿಕ್ಷಣ ನಮ್ಮ ಹಕ್ಕು, ನಮಗೆ ಕೊಡಿ.
2. ನಮಗೆ ಓದಲು ಬಿಡಿ, ಆಡಲು ಬಿಡಿ – ಪೋಷಕರಿಂದ ನಿರೀಕ್ಷೆ.
3. ನಾವು ಬರೆದದ್ದನ್ನು ನೋಡಿ, ತಿದ್ದಿ ತೀಡಿ.
4. ಕಲಿಕೆಯಲ್ಲಿರುವ ನಮ್ಮ ಕಷ್ಟವನ್ನು ನೀವು ಅರಿತು ಕೊಂಡು, ಮಾರ್ಗದರ್ಶನ ನೀಡಿ.
5. ಕಲಿಕೆ ಇಷ್ಟವಾಗುವಂತಿರಲಿ, ಕಷ್ಟ ಕೊಡಬೇಡಿ.
6. ನನಗೆ ಬೇಕು ಪ್ರೀತಿ–ವಿಶ್ವಾಸ.
7. ನಮಗೆ ಉತ್ತಮ ಪರಿಸರ ಕೊಡಿ.
8. "**ಕೈಕಟ್ಟು ಬಾಯಿಮುಚ್ಚು**" ಎಂದು ಹೇಳುವುದು ಕಲಿಕೆಗೆ ಉತ್ತಮ ಪರಿಸರ ಅಲ್ಲ.
9. ಜ್ಞಾನದಲ್ಲಿ ವಿಜ್ಞಾನವಿದೆ. ಮಕ್ಕಳಲ್ಲಿ ಜ್ಞಾನವಿದೆ. ಮನಸ್ಸಿನಲ್ಲಿ ಸಂಸ್ಕಾರ ಇದೆ. ಇದು ನಮಗೆ ಕೊಡಿ.
10. ನಮ್ಮ ಪ್ರತಿಭೆಗೆ ತಕ್ಕ ಚಟುವಟಿಕೆ ಕೊಡಿ.
11. ನೀವು ನಮಗೆ ಅಮೂಲ್ಯ ಸಮಯ ಕೊಡಿ. ನಾವು ನಂತರ ಅವಶ್ಯಕವಾಗಿ ನಿಮಗೆ ಹಿಂದಿರುಗಿಸುತ್ತೇವೆ.
12. ಬೆದರಿಸುವ ಶಿಕ್ಷಕರಗಿಂತ ಪ್ರೀತಿಸುವ ಶಿಕ್ಷಕರು ನಮಗೆ ಇಷ್ಟ.
13. ಸಮಯ ಪಾಲನೆಯಲ್ಲಿ ಶಿಕ್ಷಕರು ನಮಗೆ ಮಾದರಿಯಾಗಿರಲಿ.
14. ಕಲಿಕೆಯ ಪ್ರಕ್ರಿಯೆಯಲ್ಲಿ ನಮಗೂ ಅವಕಾಶ ನೀಡಿ.
15. ಶಿಕ್ಷಕರು ನಮ್ಮನ್ನು ಜ್ಞಾನ ದಾಹಿಗಳನ್ನಾಗಿಸಲಿ.
16. ಕಲಿಕೆ ಆಗಲಿ ಕೇವಲ ಬೋಧನೆ ಬೇಡ.
17. ದೈಹಿಕವಾಗಿ, ಮಾನಸಿಕವಾಗಿ ಪೀಡಿಸಬೇಡಿ.
18. ಲಿಂಗ ತಾರತಮ್ಯ ಮಾಡಬೇಡಿ.

19. ಮಕ್ಕಳ ಹಕ್ಕುಗಳನ್ನು ಗೌರವಿಸಿ ಅನುಷ್ಠಾನಗೊಳಿಸಿ

20. ಮಾನವೀಯ ಮೌಲ್ಯಗಳನ್ನು ಪಾಲಿಸುವ ಮೂಲಕ ನಮಗೆ ಆದರ್ಶಪ್ರಾಯರಾಗಿ.

## ಮಕ್ಕಳು ಪಾಲಕರಿಂದ ಮಾಡುವ ನಿರೀಕ್ಷೆಗಳು

1. ನಾವು ಮಕ್ಕಳು ನಮಗೂ ಮನಸ್ಸಿದೆ. ಯೋಚಿಸಲು ಬಿಡಿ ನಮ್ಮ ಆಸೆಗಳನ್ನು ಆಲಿಸಿ.

2.ನಮಗೆ ಸಂಪತ್ತು ಬೇಡ ಸಂಸ್ಕಾರ ಬೇಕು.

3. ಬೇರೆಯವರಿಗೆ ನಮ್ಮನ್ನು ಹೋಲಿಸಬೇಡಿ, ಅವರು ಬೇರೆಯವರ ಮಕ್ಕಳು, ನಾವು ನಿಮ್ಮ ಮಕ್ಕಳು.

4. ನಮ್ಮ ಮನಸ್ಸನ್ನು ಕದಡಬೇಡಿ.

5. ಟಿ.ವಿ ಯಿಂದ ನಮ್ಮನ್ನು ರಕ್ಷಿಸಿ.

6 ನಮ್ಮ ಪ್ರತಿಭೆಗೆ ತಕ್ಕ ಚಟುವಟಿಕೆ ಕೊಡಿ.

7. ಬೆಳೆದು ದೊಡ್ಡವರಾಗುವವರೆಗೆ ನಮ್ಮನ್ನು ಮಕ್ಕಳಂತೆ ಇರಲು ಬಿಡಿ.

8 ಲಿಂಗ ತಾರತಮ್ಯ ಮಾಡಬೇಡಿ.

9. ಸಕಾಲಕ್ಕೆ ಶಾಲೆಗೆ ಕಳುಹಿಸಿ.

10. ದೈಹಿಕವಾಗಿ ದಂಡಿಸಬೇಡಿ.

## 2008-09 ನಮ್ಮ ಶಾಲೆ ನಮ್ಮ ಬೋಧನಾ ದಿನಗಳು

| ಕ್ರ.ಸಂ. | ತಿಂಗಳು | ಶೈಕ್ಷಣಿಕ ವರ್ಷದ ಒಟ್ಟು ದಿನಗಳು | ಎಲ್ಲಾ ತೆರನಾದ ಒಟ್ಟು ರಜೆಗಳು | ಲಭ್ಯವಾಗ ಬಹುದಾದ ಬೋಧನಾ ದಿನಗಳು | ಒಟ್ಟು ಶಾಲಾ ದಿನಗಳ ಸಂಖ್ಯೆ |
|---|---|---|---|---|---|
| 01 | ಮೇ | 2 | 0 | 2 | |
| 02 | ಜೂನ್ | 30 | 5 | 25 | |
| 03 | ಜುಲೈ | 31 | 6 | 25 | |
| 04 | ಆಗಸ್ಟ್ | 31 | 6 | 25 | ಸ್ವಾತಂತ್ರ್ಯ ದಿನಾಚರಣೆ |
| 05 | ಸೆಪ್ಟೆಂಬರ್ | 30 | 5 | 25 | ಶಿಕ್ಷಕರ ದಿನಾಚರಣೆ |
| 06 | ಅಕ್ಟೋಬರ್ | 31 | 27 | 04 | ಗಾಂಧಿ ಜಯಂತಿ/ ಮಧ್ಯಂತರ ರಜೆ |
| 07 | ನವೆಂಬರ್ | 30 | 6 | 23 | ಕನ್ನಡ ರಾಜ್ಯೋತ್ಸವ |
| 08 | ಡಿಸೆಂಬರ್ | 31 | 4 | 27 | |

| | | | | | |
|---|---|---|---|---|---|
| 09 | ಜನವರಿ 09 | 31 | 6 | 25 | ಗಣರಾಜ್ಯ ದಿನಾಚರಣೆ |
| 10 | ಫೆಬ್ರವರಿ 09 | 28 | 4 | 24 | |
| 11 | ಮಾರ್ಚ್ 09 | 31 | 5 | 26 | |
| 12 | ಏಪ್ರಿಲ್ 09 | 10 | 2 | 8 | |
| | **ಒಟ್ಟು** | **316** | **76** | **240** | |
| | **ವಿವೇಚನಾ ರಜೆಗಳು**<br>**ಸಾಂದರ್ಭಿಕ ರಜೆ** | | | **04**<br>**15** | |
| | **ಒಟ್ಟು ಬೋಧನಾ ದಿನಗಳು** | | | **221** | |

**ಸೂಚನೆ :–** ರಾಷ್ಟ್ರೀಯ ಹಬ್ಬಗಳು ಹಾಗೂ ಪರೀಕ್ಷಾ ದಿನಗಳು ಕೂಡಾ ಬೋಧನಾ ದಿನಗಳೆಂದು ಪರಿಗಣಿಸಿದೆ.

## ಪ್ರೌಢಶಾಲೆಗಳಲ್ಲಿ ಬೋಧನಾ ಚಟುವಟಿಕೆಗಳು
## ಒಂದು ವಿಶೇಷ ಕಾರ್ಯಕ್ರಮ

**ಮೊದಲನೆಯ ಹಂತ:**

1. ದಿನಾಂಕ:01–06–2008ರಿಂದಲೇ ದಾಖಲೆಯೊಂದಿಗೆ ಬೋಧನೆ ಹಾಗೂ ಪುನರಾವರ್ತನೆ ಕಾರ್ಯಕ್ರಮ ಪ್ರಾರಂಭ.
2. ದಿನಾಂಕ: 09–06–2008 ರಿಂದ 11–08–2008 ರ ಅವಧಿಯಲ್ಲಿ ವಿಷಯವಾರು 8 ಹಾಗೂ 9 ನೆಯ ತರಗತಿಗಳಿಗೆ (ಹಿಂದಿ ಹೊರತುಪಡಿಸಿ)ನೈದಾನಿಕ ಪರೀಕ್ಷೆಗಳು ನಡೆಸುವುದು.
3. 8 ನೇ ತರಗತಿಗಾಗಿ 2008–09ರ ವಾರ್ಷಿಕ ಶೈಕ್ಷಣಿಕ ಕೈಪಿಡಿಯಲ್ಲಿ ಮಾದರಿ ಪತ್ರಿಕೆಗಳು ನೀಡಲಾಗಿದೆ. ಇದರಂತೆ 9 ನೇ ತರಗತಿಯ ಪ್ರಶ್ನೆಪತ್ರಿಕೆ ಆಯಾ ವಿಷಯ ಶಿಕ್ಷಕರು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ.

**ಎರಡನೆಯ ಹಂತ:**

1. ದಿನಾಂಕ09–06–2008 ರಿಂದ 11–08–2008 ವರೆಗೆ ವಿಷಯವಾರು ಹಾಗೂ ತರಗತಿವಾರು ನೈದಾನಿಕ ಪರೀಕ್ಷೆಯ ಪರಿಣಾಮಗಳ ವಿಶ್ಲೇಷಣೆ ಹಾಗೂ ವಿಷಯವಾರು ಕಲಿಕಾ ಕೊರತೆಗಳನ್ನು ಗುರುತಿಸುವುದು.
2. ಮಕ್ಕಳ ವರ್ಗೀಕರಣ ಕೂಡಾ ಸೇತುಬಂಧ ಕಾರ್ಯಕ್ರಮದಂತೆ ಮಾಡುವುದು.
3. ಇದನ್ನಾಧರಿಸಿ ವಿಷಯವಾರು ಶಿಕ್ಷಕರು ತರಗತಿವಾರು ಪರಿಹಾರ ಬೋಧನೆ ಪ್ರಾರಂಭಿಸುವುದು.
4. ವಿಷಯವಾರು ಪರಿಹಾರ ಬೋಧನೆ ದಿನಾಂಕ: 16–06–2008 ರಿಂದ 30–06–2008 ವರೆಗೆ ನಡೆಸುವುದು. ಇದಕ್ಕಾಗಿ ನಿಖರವಾದ ರೂಪರೇಷೆಗಳು ರೂಢಿಸಿಕೊಳ್ಳುವುದು.

**ಮೂರನೆಯ ಹಂತ:**

1. ಮೊದಲನೆಯ ಹಾಗೂ ಎರಡನೇ ಹಂತದ ಪ್ರಯತ್ನದ ಫಲಶ್ರುತಿಯನ್ನು ಅರಿಯಲು ಒಂದು ಸಾಫಲ್ಯ ಪರೀಕ್ಷೆ (**Post test**)ನಡೆಸುವುದು.
2. ಈ ಸಾಫಲ್ಯ ಪರೀಕ್ಷೆ ಕೂಡಾ ವಿಷಯವಾರು ಹಾಗೂ ತರಗತಿವಾರು ನಡೆಸುವುದು.
3. ಈ ಪರೀಕ್ಷೆಯ ಫಲಿತಾಂಶವನ್ನು ಪುನ: ವಿಶ್ಲೇಷಣೆ, ಈ ಮೊದಲು ವರ್ಗಿಕೃತ ಶ್ರೇಣಿಗೆ ಆಯಾ ಮಕ್ಕಳನ್ನು ಸೇರಿಸುವುದು.
4. ಇಲ್ಲಿ ನಮ್ಮ ಪ್ರಯತ್ನದ ವಿವರ ಸ್ವಸ್ಟವಾಗಿ ಗೋಚರಿಸುತ್ತದೆ. ಇದು ಮಗುವಿನ ಕಲಿಕೆ/ಕೊರತೆಗಳು ವಿಷಯವಾರು ಬಿಂಬಿತವಾಗಿರುತ್ತದೆ.
5. ಇದರಿಂದ ಸೆಮಿಸ್ಟರ್ ವರ್ಗೀಕರಣದಂತೆ **A+, A, B+** ಹಾಗೂ **B** ಮಕ್ಕಳನ್ನು ಹೊರತುಪಡಿಸಿ **C+** ಹಾಗೂ **C** ಶ್ರೇಣಿಯ ಮಕ್ಕಳನ್ನು ಪ್ರತ್ಯೇಕಗೊಳಿಸಿ ಒಂದು ಯಾದಿ ತರಗತಿವಾರು ತಯಾರಿಸುವುದು.
6. ಈ ಸಾಫಲ್ಯ ಪರೀಕ್ಷೆ ಹಾಗೂ ವಿಶ್ಲೇಷಣೆ ವಸ್ತುನಿಷ್ಠವಾಗಿರುವುದು. ಅನಿವಾರ್ಯಕ್ಕಿಂತ ಅತ್ಯಂತ ಅವಶ್ಯವಾಗಿರುತ್ತದೆ. ಈ ಅಂಶ ಗಮನಿಸಲೇಬೇಕು.

<u>ನಾಲ್ಕನೆಯ ಹಂತ: (ನಿರಂತರ ಪರಿಹಾರ ಬೋಧನೆ)</u>

1. ಮುಖ್ಯವಾಹಿನಿಗೆ ಸೇರಿದ ಮಕ್ಕಳನ್ನು ಹೊರತುಪಡಿಸಿ ಇಲ್ಲಿ C+ ಹಾಗೂ C ಹಂತದ ಮಕ್ಕಳನ್ನು ಪುನ: ನಿರಂತರವಾಗಿ ಪರಿಹಾರ ಬೋಧನೆಗೆ ಅಣಿಗೊಳಿಸುವುದು.
2. ಈ ಪರಿಹಾರ ಬೋಧನೆ ಕೂಡಾ ತರಗತಿವಾರು ಹಾಗೂ ವಿಷಯವಾರು ಕಲಿಕಾ ಕೊರತೆಯ ಆಧಾರದ ಮೇಲೆ ರೂಪಿಸಿಕೊಳ್ಳುವುದು.
3. ಈ ಪ್ರಕ್ರಿಯೆಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತ 20 : 1 ರಂತೆ ನಿಗಧಿಮಾಡಲಾಗಿದೆ. ಇದು ಅವಶ್ಯಕತೆಯ ಆಧಾರದ ಮೇಲೆ ಸ್ಥಳಿಯವಾಗಿ ಶಾಲಾ ಮಟ್ಟದಲ್ಲಿಯೇ ನಿರ್ಧರಿಸುವ ಹಕ್ಕು ಶಾಲೆಯ ಮುಖ್ಯಸ್ಥರದಾಗಿದೆ.
4. ಇಂತಹ ಮಕ್ಕಳ ಕಲಿಕಾ ಕೊರತೆಯನ್ನು ನೀಗಿಸಲು ಪ್ರತಿದಿನ ಒಂದೊಂದು ಗಂಟೆ ದಿನಕ್ಕೊಂದು ವಿಷಯದಂತೆ, ಪರಿಹಾರ ಬೋಧನೆ ಮಾಡುವುದು.
5. ಇದಕ್ಕಾಗಿ ಒಂದು ಸಂಕ್ಷಿಪ್ತ ವೇಳಾಪಟ್ಟಿ ತಯಾರಿಸಿಕೊಂಡು ಪ್ರತಿಯೊಬ್ಬ ಶಿಕ್ಷಕ/ಶಿಕ್ಷಕರಿಗೆ ನೀಡುವುದು.
6. ಈ ಕಾರ್ಯಕ್ರಮ ಮಕ್ಕಳ ಪರವಾಗಿ ಇದ್ದುದರಿಂದ, ಶಾಲೆಯ ಪ್ರತಿಯೊಬ್ಬ ಶಿಕ್ಷಕರು ಅವರವರ ವಿಷಯಕ್ಕೆ ಹೊಣೆಗಾರರಾದರೆ, ಶಾಲೆಯ ಮುಖ್ಯಸ್ಥರು ಶಾಲೆಯ ಸಂಪೂರ್ಣ ಪ್ರಗತಿಗೆ ಹೊಣೆಗಾರರಾಗುತ್ತಾರೆ.

<u>ವಿಶೇಷ ಸೂಚನೆ:</u>

- 8 ನೇ ತರಗತಿಯ ಮಾದರಿ ಪ್ರಶ್ನೆ ಪತ್ರಿಕೆಗಳ ಆಧಾರದ ಮೇಲೆ 9 ನೇ ತರಗತಿಯ ಪ್ರಶ್ನೆಪತ್ರಿಕೆಗಳು ಆಯಾ ವಿಷಯ ಶಿಕ್ಷಕರೇ ತಯಾರಿಸಿಕೊಂಡು 8 ಹಾಗೂ 9 ನೇ ತರಗತಿಗಳಿಗೆ ಈ ಪರೀಕ್ಷೆಗಳು ನಡೆಸುವುದು.
- ಈ ಪರೀಕ್ಷೆಗಳು ದಿನಕ್ಕೆರಡು ಅಥವಾ ಮೂರು ಮಾಡಬಹುದು. ಆದರೆ ದಿನಕ್ಕೊಂದರಂತೆ ಅಲ್ಲವೆಂಬುದು ಗಮನಿಸಬೇಕು.
- ಈ ಬಗ್ಗೆ ಶಾಲಾ ಮಟ್ಟದಲ್ಲಿಯೇ ತೀರ್ಮಾನಿಸಿ, ಅದಕ್ಕಾಗಿ ತಾತ್ಕಾಲಿಕ ವೇಳಾಪಟ್ಟಿ ನಿಗಧಿಮಾಡಿಕೊಳ್ಳುವುದು.

**ಪರಿಹಾರ ಬೋಧನೆಯ ವೇಳಾಪಟ್ಟಿ.**

| | | |
|---|---|---|
| 01 | 02–06–2008 | ಬೋಧನೆ ಹಾಗೂ ಪುನರಾವರ್ತನೆ ಪ್ರಾರಂಭ |
| 02 | 09–06–2008 ರಿಂದ 11–06–2008 | ನೈದಾನಿತ ಪರೀಕ್ಷೆ ಹಾಗೂ ಕಲಿಕಾ ಕೊರತೆಗಳನ್ನು ಗುರುತಿಸುವುದು. |
| 03 | 16–06–2008 | ಪರಿಹಾರ ಬೋಧನೆ ಪ್ರಾರಂಭ |
| 04 | 30–06–2008 | ಸಾಫಲ್ಯ ಪರೀಕ್ಷೆ ನಡೆಸುವುದು. |
| 05 | 01–07–2008 | ಫಲಿತಾಂಶಗಳ ವಿಶ್ಲೇಷಣೆ ಹಾಗೂ ಕಾರ್ಯಯೋಜನೆ |
| 06 | 02–07–2008 | ಸಿ+ ಹಾಗೂ ಸಿ ವಿದ್ಯಾರ್ಥಿಗಳಿಗೆ ನಿರಂತರ ಪರಿಹಾರ ಬೋಧನೆ |

| | | |
|---|---|---|
| | | ಮುಂದುವರೆಸುವುದು. |

## 10 ನೇ ತರಗತಿಗೆ: ವಿಶೇಷ ಗಮನ

2007–08ನೆಯ ಸಾಲಿನಲ್ಲಿ ಇಡೀ ರಾಜ್ಯಾದ್ಯಂತ ಈ ಕಾರ್ಯಕ್ರಮ ಜಾರಿಯಲ್ಲಿದೆ. ಅನೇಕ ಶಾಲೆಯಲ್ಲಿ ಉತ್ತಮ ಪರಿಣಾಮ ಕಂಡ ಸಂತೋಷ–ಸಮಧಾನ ನಮ್ಮದು. ಅದಕ್ಕಾಗಿ ಈ ಕಾರ್ಯಕ್ರಮ 2008–09ರಲ್ಲಿಯೂ ನಿರಂತರವಾಗಿ ಮುಂದೊರೆಯಬೇಕು. ಇದು ಮಕ್ಕಳ ಪರವಾಗಿರುವ ನಮ್ಮ ಆಶಯ ಆದ್ದರಿಂದ

1. 10ನೇ ತರಗತಿಗಾಗಿ, ದಿನಕ್ಕೊಂದು, ವಿಷಯದಂತೆ ಮುಂಜಾನೆ ಅವಧಿಗೆ ಒಂದು ವಿಶೇಷ ತರಗತಿ ಮೂಲಕ ಪ್ರತಿನಿತ್ಯ ಬೋಧಿಸುವುದು.
2. ಪ್ರತಿದಿನ ಸಾಯಂಕಾಲ ಒಂದು ಗಂಟೆಕಾಲ ಮೇಲ್ವಿಚಾರಣೆಯಂತೆ ಗುಂಪು ಕಲಿಕೆ ದಿನಕ್ಕೊಂದು ವಿಷಯದಂತೆ ಆಯಾ ವಿಷಯ ಶಿಕ್ಷಕರು, ಮಕ್ಕಳು ಅನುಭವಿಸುವ ಕಲಿಕಾ ಕೊರತೆಗಳಿಗೆ, ಅವರ ಅಪೇಕ್ಷಣೆಯ ಮೇರೆಗೆ ಮಾರ್ಗದರ್ಶನ ನೀಡುವುದು.
3. ಇಲ್ಲಿಯ ಪ್ರಮುಖ ಆಂಶವೆಂದರೆ ಮಕ್ಕಳಲ್ಲಿ ಓದುವ–ಬರೆಯುವ–ಕಲಿಯುವ ಹವ್ಯಾಸ ಮೂಡಿಸುವುದು.

ವಿಶೇಷ ಸೂಚನೆ:

- ಬೇಸಿಗೆ ರಜೆಗೆ ಹೋಗುವ ಮುನ್ನ ಅಂದರೆ ದಿನಾಂಕ:10–04–2008ರೊಳಗೆ, ರಾಜ್ಯದ ಎಲ್ಲಾ ಪ್ರೌಢಶಾಲೆಗಳಲ್ಲಿ ಈ ಬಗ್ಗೆ ಚರ್ಚೆ ನಡೆಸಿ, ಮುಂದಿನ ಶೈಕಣಿಕವಾಗಿ ಕೈಗೊಳ್ಳಬಹುದಾದ ಕಾರ್ಯ ಚಟುವಟಿಕೆಗಳಿಗೆ ಚಾಲನೆ ನೀಡುವುದು.
- ಈ ವಿಷಯ ಮೊದಲು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮಟ್ಟದ ಸಭೆಯಲ್ಲಿ ಹಾಗೂ ಬ್ಲಾಕ್ ಮಟ್ಟದಲ್ಲಿ ಆಯಾ ವಲಯ/ಕ್ಷೇತ್ರದಲ್ಲಿಯ ಪ್ರತಿಯೊಂದು ಶಾಲೆಯ ಶಿಕ್ಷಕರ ಗಮನಕ್ಕೆ ತರುವುದು.

## ಪರಿವಿಡಿ

1.ಆಶಯ.

2.ಮೊದಲಮಾತು.

3. ವಾರ್ಷಿಕ ಶೈಕ್ಷಣಿಕ ಕಾರ್ಯಸೂಚಿ.

4. ವಾರ್ಷಿಕ ಕ್ಯಾಲೆಂಡರ್.

5.2008–09ನೇ ಸಾಲಿನ ಮಾಹೆವಾರು ಕಾರ್ಯಸೂಚಿ.

6. 2008–09ನೇ ಸಾಲಿನ ಶಾಲೆಯ ಭೊದನಾ ದಿನಗಳು.

7. ಶಾಲೆಯ ಕರ್ತವ್ಯದ ಜೊತೆಯಲ್ಲಿ ಅಪೇಕ್ಷಿತ ಕಾರ್ಯಗಳ ಪಟ್ಟಿ.

8. ಮಕ್ಕಳು ಶಿಕ್ಷಕರಿಂದ ಮಾಡುವ ನಿರೀಕ್ಷೆಗಳು.

9. ಮಕ್ಕಳು ಪಾಲಕರಿಂದ ಮಾಡುವ ನಿರೀಕ್ಷೆಗಳು.

10. ಪಾಲಕರಿಂದ ಶಿಕ್ಷಕರ ನಿರೀಕ್ಷೆಗಳು.

11. ಶಾಲಾ ಮುಖ್ಯಶಿಕ್ಷಕರಿಂದ ನಿರೀಕ್ಷೆಗಳು.

12.ಶಾಲಾ ಸಹಶಿಕ್ಷಕರಿಂದ ನಿರೀಕ್ಷೆಗಳು.

13. ಅಧ್ಯಯನ, ಯೋಜನೆ, ಅವಧಿಗಳ ವಿಂಗಡಣೆ.

14. ಶುಲ್ಕದ ವಿವರಗಳು.

15. ಸಮುದಾಯದತ್ತ ಶಾಲಾ ಕಾರ್ಯಕ್ರಮ.

16 ಶಾಲಾ ಆಡಳಿತದಲ್ಲಿ ಗಮನಿಸಬೇಕಾದ ಇತರೆ ವಿಷಯಗಳು.

17. ಅಕ್ಷರ ದಾಸೋಹದ ಮುಖ್ಯಾಂಶಗಳು.

18. ಕೆ.ಎಸ್.ಕ್ಯೂ.ಎ.ಓ ಸಂಸ್ಥೆಯ ಮುಖ್ಯಾಂಶಗಳು.

19 ಎಸ್.ಡಬ್ಲ್ಯೂ.ಎಫ್ ಮತ್ತು ಟಿ.ಬಿ. ಎಫ್, ಮುಖ್ಯಾಂಶಗಳು.

20. ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಮುಖ್ಯಾಂಶಗಳು.

20 ಸರ್ಕಾರದ ಆದೇಶಗಳು ಮತ್ತು ಇಲಾಖೆಯಿಂದ ಹೊರಡಿಸಲಾದ ಸುತ್ತೋಲೆಗಳು.